# ಎರಡನೇ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ 4 ಮತ್ತು 5ನೇ ವರದಿಗಳ ಕುರಿತು

# ಪತ್ರಿಕಾ ಟಿಪ್ಪಣಿ

**(ಟಿಪ್ಪಣಿ – ಈ ಟಿಪ್ಪಣಿಯು ಸಂಕ್ಷಿಪ್ತ ಅಂಶಗಳನ್ನು ಮಾತ್ರ ಒಳಗೊಂಡಿದೆ, ಹೆಚ್ಚಿನ ವಿವರಗಳಿಗಾಗಿ ಸಂಪೂರ್ಣ ವರದಿಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ವೆಬ್‌ಸೈಟ್ – https://karc2.karnataka.gov.in)**

## 1. ಅನುಸರಿಸಿದ ವಿಧಾನಗಳು

ದಿನಾಂಕ 11.01.2021 ರಿಂದ ದಿನಾಂಕ 30.11.2022 ರ ನಡುವೆ 21 ಜಿಲ್ಲೆಗಳಿಗೆ, 52 ತಾಲ್ಲೂಕುಗಳಿಗೆ, 147 ನಗರಗಳಿಗೆ/ಪಟ್ಟಣಗಳಿಗೆ ಮತ್ತು 46 ಗ್ರಾಮಗಳಿಗೆ ಮತ್ತು 302 ಸಂಸ್ಥೆಗಳಿಗೆ ಭೇಟಿ ನೀಡಿ, 3,482 ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಮತ್ತು ನಾಗರಿಕರನ್ನು ಭೇಟಿ ಮಾಡಲಾಯಿತು. 415 ಸಭೆಗಳನ್ನು ನಡೆಸಲಾಗಿದ್ದು ಇದರಲ್ಲಿ ಭಾಗವಹಿಸಿದವರ ಸಂಖ್ಯೆ ಸುಮಾರು 6,000. ಕಾಲ್ ಸೆಂಟರ್ ಮೂಲಕ ರಾಜ್ಯ ಸರ್ಕಾರದ ನಾಗರಿಕ ಸೇವೆಗಳನ್ನು ಬಳಸುವ 71,963 ಬಳಕೆದಾರರಿಗೆ ಕರೆ ಮಾಡಲಾಗಿದೆ ಮತ್ತು ಅವರ ಪೈಕಿ 25,253 ಬಳಕೆದಾರರಿಂದ ಪ್ರತಿಕ್ರಿಯೆಯನ್ನು ಪಡೆಯಲಾಗಿದೆ. 8 ಪ್ರತಿಷ್ಠಿತ ಸಂಸ್ಥೆಗಳಿಂದ ಅಧ್ಯಯನ ವರದಿಗಳನ್ನು ಪಡೆಯಲಾಗಿದೆ.

## 2. ಶಿಫಾರಸುಗಳ ಸಾರಾಂಶದ ವಿವರ:

| ಕ್ರ. ಸಂ | ಇಲಾಖೆಗಳ ಹೆಸರು /ವಿಷಯ | ಒಟ್ಟು ಶಿಫಾರಸುಗಳು |
|---|---|---|
| 1 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ | 99 |
| 2 | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | 152 |
| 3 | ಉನ್ನತ ಶಿಕ್ಷಣ | 140 |
| 4 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 182 |
| 5 | ವೈದ್ಯಕೀಯ ಶಿಕ್ಷಣ | 96 |
| 6 | ಯುವ ಸಬಲೀಕರಣ ಮತ್ತು ಕ್ರೀಡೆ | 33 |
| 7 | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ | 102 |
| 8 | ಕಾರ್ಮಿಕ | 136 |
| | ಒಟ್ಟು ಶಿಫಾರಸುಗಳು 4ನೇ ವರದಿ | **940** |
| 1 | ಕೃಷಿ | 97 |
| 2 | i. ತೋಟಗಾರಿಕೆ<br>ii. ರೇಷ್ಮೆ | 73<br>32 |
| 3 | i. ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳು<br>ii. ಮೀನುಗಾರಿಕೆ | 78<br>60 |
| 4 | ಸಹಕಾರ | 168 |
| 5 | ಹೆಚ್ ರಾಮಸ್ವಾಮಿ 1ನೇ ಆಡಳಿತ ಸುಧಾರಣಾ ಆಯೋಗದ ಶಿಫಾರಸುಗಳ ಕುರಿತು ಅನುಪಾಲನಾ ವರದಿ | – |
| 6 | **ಸಾಮಾನ್ಯ ಶಿಫಾರಸುಗಳು** | 27 |
| 7 | ಗ್ರಾಮೀಣ ಕೋಟಾವನ್ನು ಮಾರ್ಪಾಡಿಸುವುದು | 1 |
| 8 | ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆ | 17 |
| 9 | ಇ–ಪ್ರೊಕ್ಯೂರ್‌ಮೆಂಟ್‌ಗೆ ಸಂಬಂಧಿಸಿದ ಶಿಫಾರಸುಗಳು | 6 |

| | | |
|---|---|---|
| 10 | ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಂಬಂಧಿಸಿದ ಶಿಫಾರಸುಗಳು | 27 |
| 11 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮರುಸಂಘಟನೆ | 13 |
| 12 | ಅಧ್ಯಯನ ವರದಿ–ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬೆಂಗಳೂರು | 38 |
| 13 | ಅಧ್ಯಯನ ವರದಿ–ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಅಂಡ್ ಎಕಾನಾಮಿಕ್ ಚೇಂಜ್ | 30 |
| 14 | ಕಾರ್ಯ ಸುಧಾರಣಾ ತಂಡಗಳ ರಚನೆ | 1 |
| 15 | ಪಾಲುದಾರರ ಪರಿಷತ್ತುಗಳ ಸ್ಥಾಪನೆ | 1 |
| | **ಒಟ್ಟು ಶಿಫಾರಸುಗಳು 5ನೇ ವರದಿ** | 669 |
| | **ಒಟ್ಟು** | 1609 |

| **ವರದಿಗಳು** | **ಸಲ್ಲಿಸಿದ ದಿನಾಂಕ** | **ಶಿಫಾರಸುಗಳ ಸಂಖ್ಯೆ** |
|---|---|---|
| 1ನೇ ವರದಿ | 3ನೇ ಜುಲೈ, 2021 | 856 |
| 2 ಮತ್ತು 3ನೇ ವರದಿಗಳು | 18ನೇ ಫೆಬ್ರವರಿ, 2022 | 1,165 |
| 4 ಮತ್ತು 5ನೇ ವರದಿಗಳು | ಜನವರಿ, 2023 | 1,609 |
| **ಒಟ್ಟು 05 ವರದಿಗಳಲ್ಲಿ ಮಾಡಿದ ಶಿಫಾರಸುಗಳು** | | **3,630** |

## 3. ಮುಂಚೂಣಿ ಸಂಸ್ಥೆಗಳಲ್ಲಿ (Frontline offices) ನಾಗರಿಕರಿಗೆ ಸೇವೆಗಳನ್ನು ಸುಧಾರಿಸುವುದು

- ಸರ್ಕಾರಿ ಶಾಲಾ ಕಟ್ಟಡದಿಂದ 300 ಮೀಟರ್ ಅಂತರದಲ್ಲಿರುವ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 6,307 ಅಂಗನವಾಡಿ ಕೇಂದ್ರಗಳನ್ನು ಕೊಠಡಿ ಲಭ್ಯವಿದ್ದಲ್ಲಿ ಹತ್ತಿರದ ಶಾಲಾ ಕಟ್ಟಡಕ್ಕೆ ಸ್ಥಳಾಂತರಿಸಬಹುದು. ಇದರಿಂದ ಅಂಗನವಾಡಿ ಮಕ್ಕಳು ಸುಲಭವಾಗಿ ಶಾಲೆಯಲ್ಲಿ ಮುಂದುವರಿಯಬಹುದು.

- ಡ್ರಾಪ್‌ಔಟ್ ದರವನ್ನು ಕಡಿಮೆ ಮಾಡಲು, ಪರಸ್ಪರ 100 ಮೀಟರ್ ಅಂತರದಲ್ಲಿರುವ 3,457 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ಹಿರಿಯ ಪ್ರಾಥಮಿಕ ಶಾಲೆಗಳನ್ನು 1,667 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿಲೀನಗೊಳಿಸಬಹುದು.

- ಪರಸ್ಪರ 100 ಮೀಟರ್‌ಗಳ ಅಂತರದಲ್ಲಿರುವ 2,460 ಕಿರಿಯ ಪ್ರಾಥಮಿಕ ಶಾಲೆಗಳು, ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳನ್ನು 1135 ಸಂಯುಕ್ತ/ಕ್ಲಸ್ಟರ್ ಪ್ರೌಢಶಾಲೆಗಳಾಗಿ ಅಥವಾ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಾಗಿ ವಿಲೀನಗೊಳಿಸಬಹುದು.

- 879 ಕಿರಿಯ ಪ್ರಾಥಮಿಕ ಶಾಲೆಗಳು, ಹಿರಿಯ ಪ್ರಾಥಮಿಕ ಶಾಲೆಗಳು, ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು 359 ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್)ಗಳಾಗಿ ವಿಲೀನಗೊಳಿಸಬಹುದು. ಈ ಸೌಲಭ್ಯವನ್ನು ಖಾಸಗಿ ಆಡಳಿತ ಮಂಡಳಿಗಳ ಶಾಲೆಗಳಿಗೂ ಸಹ ಅನ್ವಯಿಸಬಹುದು.

- ಕರ್ನಾಟಕ ಪಬ್ಲಿಕ್ ಸ್ಕೂಲ್ ಮತ್ತು ಕ್ಲಸ್ಟರ್ ಶಾಲೆಗಳಲ್ಲಿ ಶಾಲೆಗಳಿದ್ದರೆ, 1ನೇ ತರಗತಿಯಿಂದ 12ನೇ ತರಗತಿಯವರೆಗೆ ಮಗುವಿಗೆ ಮೂರು ಬಾರಿ ವರ್ಗಾವಣೆ ಪ್ರಮಾಣಪತ್ರ ತೆಗೆದುಕೊಳ್ಳುವ ಮತ್ತು ಪ್ರವೇಶ ಪಡೆಯಬೇಕಾದ ಅಗತ್ಯವನ್ನು ತೆಗೆದುಹಾಕುವ ಆದೇಶಗಳನ್ನು ಹೊರಡಿಸಬಹುದು.

- ವಿಕಲಚೇತನರ ಪುನರ್ವಸತಿ ಚಿಕಿತ್ಸೆಯನ್ನು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ(ಎಬಿಎಆರ್‌ಕೆ) ವ್ಯಾಪ್ತಿಯಲ್ಲಿ ಸೇರಿಸಬಹುದು.

- ಮಾನದಂಡದಂತೆ ಬೆಳಗಾವಿ, ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿಯ 4 ಜಿಲ್ಲೆಗಳಲ್ಲಿ ಸುಮಾರು 154 ಪಶು ಚಿಕಿತ್ಸಾಲಯಗಳ ಕೊರತೆ ಇವೆ. ಮಾನದಂಡದಂತೆ 25 ಜಿಲ್ಲೆಗಳಲ್ಲಿ ಇರುವ 737 ಹೆಚ್ಚುವರಿ ವೆಟರ್‌ನರಿ ಕ್ಲಿನಿಕ್‌ಗಳ ಪೈಕಿ 154 ವೆಟರ್‌ನರಿ ಕ್ಲಿನಿಕ್‌ಗಳನ್ನು ಅಗತ್ಯವಿರುವ ಸದರಿ 4 ಜಿಲ್ಲೆಗಳಿಗೆ ಸ್ಥಳಾಂತರಿಸಬಹುದು.

- ರೈತ ಸಂಪರ್ಕ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ವರದಿಯಲ್ಲಿ ನೀಡಲಾದ ವಿವರಗಳ ಪ್ರಕಾರ ಕಾರ್ಯಭಾರದ ಆಧಾರದ ಮೇಲೆ ಸ್ಥಳಾಂತರಿಸುವುದು.

- ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಸಾಮಾನ್ಯ ವಿಂಗಡಿಸುವ ಕೇಂದ್ರವನ್ನು ಒಪಿಡಿ ಕೌಂಟರ್‌ಗಳಲ್ಲಿ ಸ್ಥಾಪಿಸಿ ರೆಫರಲ್ ಮತ್ತು ಇ-ಹಾಸ್ಪಿಟಲ್‌ಗಳಲ್ಲಿ ಮಾಹಿತಿಯನ್ನು ನಮೂದಿಸಲು ಎಂಬಿಬಿಎಸ್, ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಇಂಟರ್ನ್‌ಗಳನ್ನು ಬಳಸಬಹುದು. ಇಂಟರ್ನ್‌ಗಳು ಮತ್ತು ಆರೋಗ್ಯ ಮಿತ್ರರಿಗೆ ಟ್ಯಾಬ್‌ಗಳನ್ನು ನೀಡುವ ಮೂಲಕ ಸ್ಥಳದಲ್ಲೇ ನೋಂದಣಿ, ಪಾವತಿ ಮತ್ತು ಒಪಿಡಿ ಸ್ಲಿಪ್‌ಗಳನ್ನು ವಿತರಣೆ ಮಾಡಬಹುದು. ಇದಕ್ಕಾಗಿ ಕಿಯೋಸ್ಕ್‌ಗಳು ಮತ್ತು ಯುಪಿಐ ವ್ಯವಸ್ಥೆಯನ್ನು ಬಳಸಿಕೊಳ್ಳಬಹುದು. ಸಹಾಯಕ್ಕಾಗಿ ಕನ್ನಡದಲ್ಲಿ ಸೈನೇಜ್ ಫಲಕಗಳನ್ನು ಅಳವಡಿಸಬೇಕು.

- ಕೇಂದ್ರ ಸರ್ಕಾರದ ವೈದ್ಯಕೀಯ ಸಂಸ್ಥೆಗಳು ಮತ್ತು ಸಿಜಿಹೆಚ್‌ಎಸ್ ನಲ್ಲಿರುವಂತೆ, ಎಲ್ಲಾ ಇಲಾಖೆಗಳ ಸರ್ಕಾರಿ ವೈದ್ಯರ ಖಾಸಗಿ ವೃತ್ತಿ(private practice)ಯನ್ನು ನಿಷೇಧಿಸಬಹುದು. ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಜೆ ಒಪಿಡಿಗಳನ್ನು ಸಹ ಪ್ರಾರಂಭಿಸಬಹುದು.

- ಶೌಚಾಲಯ ಸೌಲಭ್ಯ ಇಲ್ಲದ 1000ಕ್ಕೂ ಹೆಚ್ಚು ಪಶು ಔಷಧಾಲಯಗಳು (VD) ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು (PVC) ರಾಜ್ಯದಲ್ಲಿವೆ. ಎಲ್ಲಾ ಔಷಧಾಲಯಗಳು ಮತ್ತು ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಶೌಚಾಲಯ ಹಾಗೂ ಜಾನುವಾರುಗಳಿಗೆ ನೀರಿನ ತೊಟ್ಟಿಗಳನ್ನು ಮತ್ತು ಟ್ರೈವೀಸ್ ಶೆಲ್ಟರ್‌ಗಳನ್ನು ಒದಗಿಸಬಹುದು.

- ಸ್ಥಳೀಯ ಪ್ರದೇಶದ ನಿರ್ದಿಷ್ಟ ರೋಗಗಳು/ಅಗತ್ಯಗಳು ಮತ್ತು ತುರ್ತು ಸಂದರ್ಭಗಳಲ್ಲಿ ಔಷಧಿಗಳ ಖರೀದಿಗಾಗಿ PVC ಗಳಿಗೆ ವಾರ್ಷಿಕ ರೂ.15,000, VD ಗಳಿಗೆ ರೂ.25,000. ಮತ್ತು ಹೋಬಳಿ ಕೇಂದ್ರ ಕಚೇರಿಯಲ್ಲಿರುವ VD ಗಳಿಗೆ ರೂ.50,000 ಅನುದಾನ ನೀಡಬಹುದು.

- ಆರ್‌ಎಫ್‌ಐಡಿ ಟ್ಯಾಗ್‌ಗಳನ್ನು ಹೊಂದಿರುವ ಇಸ್ರೋ ಸಂಸ್ಥೆ ತಯಾರಿಸಿದ ನೌಕಾ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಎಲ್ಲಾ 4500 ಪರವಾನಗಿ ಪಡೆದ ಯಾಂತ್ರೀಕೃತ ದೋಣಿಗಳಿಗೆ ವಿಪತ್ತುಗಳ ಸಂದರ್ಭದಲ್ಲಿ ಅವುಗಳ ಸ್ಥಿತಿಯನ್ನು ತಿಳಿಯಲು ಹಾಗೂ ಭದ್ರತಾ ಕ್ರಮವಾಗಿ ಟ್ರ್ಯಾಕ್ ಮಾಡಲು ಎಸ್‌ಡಿಆರ್‌ಎಫ್ ನಿಧಿ ಬಳಸಿ ಆರಂಭಿಸಬಹುದು.

### 4. ತಾಯಂದಿರ ಮರಣ ಪ್ರಮಾಣ (ಎಂಎಂಆರ್), ಶಿಶು ಮರಣ ಪ್ರಮಾಣ (ಐಎಂಆರ್)ವನ್ನು ಕಡಿಮೆ ಮಾಡುವುದು ಮತ್ತು ಪೌಷ್ಟಿಕಾಂಶದ ಮಟ್ಟವನ್ನು ಸುಧಾರಿಸುವುದು

- 6 ತಿಂಗಳಿಂದ 3 ವರ್ಷ ವಯಸ್ಸಿನ ತೀವ್ರ ಅಪೌಷ್ಟಿಕತೆ (SAM) ಮತ್ತು ಸಾಧಾರಣ ಅಪೌಷ್ಟಿಕತೆ (MAM) ಯಿಂದ ಬಳಲುತ್ತಿರುವ ಮಕ್ಕಳಿಗೆ ಈಗ ವಾರಕ್ಕೆ 2 ಮೊಟ್ಟೆಗಳನ್ನು ನೀಡುತ್ತಿದ್ದು ಇದನ್ನು 5 ಮೊಟ್ಟೆಗಳಿಗೆ ಹೆಚ್ಚಿಸಬಹುದು ಮತ್ತು ಸಾಮಾನ್ಯ ಮಕ್ಕಳಿಗೂ ಸಹ ವಾರಕ್ಕೆ 2 ಮೊಟ್ಟೆಗಳನ್ನು ನೀಡಬಹುದು.
- ಎಲ್ಲಾ ಜಿಲ್ಲೆಗಳಲ್ಲಿ 15 ರಿಂದ 18 ವರ್ಷ ವಯಸ್ಸಿನ ಶಾಲೆಯಿಂದ ಹೊರಗುಳಿದ ಬಾಲಕಿಯರಿಗೆ ರಾಜ್ಯ ಅನುದಾನದೊಂದಿಗೆ ಅಡೋಲೆಸೆಂಟ್ ಬಾಲಕಿಯರ ಯೋಜನೆಯನ್ನು ವಿಸ್ತರಣೆ ಮಾಡಬಹುದು. ಒಟ್ಟು ಶಾಲೆಯಿಂದ ಹೊರಗುಳಿದ ಈ ವಯೋಮಿತಿಯ ಹೆಣ್ಣುಮಕ್ಕಳ ಸಂಖ್ಯೆ ಸುಮಾರು 7.50 ಲಕ್ಷಗಳ ಪೈಕಿ ಗ್ರಾಮೀಣ ಪ್ರದೇಶದ ಸುಮಾರು 4.50 ಲಕ್ಷ ಮತ್ತು ನಗರ ಪ್ರದೇಶದ 1.50 ಲಕ್ಷ ಹೆಣ್ಣುಮಕ್ಕಳಿಗೆ ಗುರಿ

ನಿಗದಿಪಡಿಸಿದರೆ ಆರ್ಥಿಕ ಹೊರೆ ವಾರ್ಷಿಕವಾಗಿ ಸುಮಾರು ರೂ 3,000 * 6 ಲಕ್ಷ = ರೂ 180 ಕೋಟಿಗಳಾಗುತ್ತವೆ.

- ಎಮ್‌ಎಮ್‌ಆರ್ ಮತ್ತು ಐಎಮ್‌ಆರ್ ಅನ್ನು ಕಡಿಮೆ ಮಾಡಲು ಇಡೀ ದಿನ ಪ್ರಸೂತಿ ಸೇವೆಯನ್ನು ಒದಗಿಸಲು ಹೆಚ್ಚಿನ ಕೆಲಸದ ಹೊರೆ ಹೊಂದಿರುವ ತಾಲೂಕು ಆಸ್ಪತ್ರೆಗಳಿಗೆ ಒಬಿಜಿ, ಪೀಡಿಯಾಟ್ರಿಕ್ಸ್ ಮತ್ತು ಅರಿವಳಿಕೆ ತಜ್ಞರ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡಿ ಸ್ನಾತಕೋತ್ತರ (PG) ವಿದ್ಯಾರ್ಥಿಗಳನ್ನು ನೇಮಿಸಬಹುದು.
- ಸರ್ಕಾರಿ ವೈದ್ಯರಿಗೆ ಪ್ರತಿ ವರ್ಷದ ಗ್ರಾಮೀಣ ಸೇವೆಗೆ ಶೇ.10 ಅಂಕಗಳಂತೆ ಗರಿಷ್ಠ 30% ಅಂಕಗಳವರೆಗೆ NEET PG ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಿಗೆ ಸೇರಿಸಲು ಪರಿಗಣಿಸಬಹುದು.

## 5. ಉನ್ನತ ಪ್ರೌಢ (ಹೈಯರ್ ಸೆಕೆಂಡರಿ) ಮತ್ತು ಉನ್ನತ ಶಿಕ್ಷಣ ದಾಖಲಾತಿಯನ್ನು ಸುಧಾರಿಸುವುದು

| ರಾಜ್ಯಗಳು | ಜಿಇಆರ್ ಹೈಯರ್ ಸೆಕೆಂಡರಿ (ತರಗತಿ 11-12) | ವ್ಯತ್ಯಾಸ(ರಾಜ್ಯ-ಕರ್ನಾಟಕ) |
|---|---|---|
| ಕರ್ನಾಟಕ | 52.1 | – |
| ಕೇರಳ | 83.0 | 30.9 |
| ತಮಿಳುನಾಡು | 73.2 | 21.1 |
| ಮಹಾರಾಷ್ಟ್ರ | 67.0 | 14.9 |
| ತೆಲಂಗಾಣ | 57.2 | 5.1 |
| ಆಂಧ್ರಪ್ರದೇಶ | 52.2 | 0.1 |

SSLC ಪರೀಕ್ಷೆಯಲ್ಲಿ ಹೆಚ್ಚಿನ ಅನುತ್ತೀರ್ಣತೆಯ ಪ್ರಮಾಣದಿಂದ ಹೆಚ್ಚಾಗಿ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳು ಬಾಧಿತರಾಗುತ್ತಾರೆ. ನೆರೆಯ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇಕಡಾವಾರು ಉತ್ತೀರ್ಣತೆ ಕಡಿಮೆ. ರಾಜ್ಯದಲ್ಲಿ ಒಟ್ಟು ದಾಖಲಾತಿ ಪ್ರಮಾಣ (Gross Enrolment Ratio) ಸುಧಾರಿಸಲು ಶಿಫಾರಸುಗಳನ್ನು ನೀಡಲಾಗಿದೆ.

i. ನೆರೆಯ ರಾಜ್ಯಗಳಂತೆ SSLC, PU ಪರೀಕ್ಷೆಯಲ್ಲಿ ಕಲಾ ಮತ್ತು ವಾಣಿಜ್ಯ ವಿದ್ಯಾರ್ಥಿಗಳಿಗೂ ಆಂತರಿಕ ಮೌಲ್ಯಮಾಪನ ಅಂಕಗಳೊಂದಿಗೆ ಅಳವಡಿಸುವುದು.

ii. SSLC, PU ಪರೀಕ್ಷೆಗಳಲ್ಲಿ ವಿಜ್ಞಾನ ವಿಷಯಗಳಲ್ಲಿ 15 ಅಂಕಗಳಿಗೆ ಮತ್ತು ಸಮಾಜ ವಿಜ್ಞಾನ ಮತ್ತು ಭಾಷಾ ವಿಷಯಗಳಲ್ಲಿ 20 ಅಂಕಗಳಿಗೆ ಬಹು ಆಯ್ಕೆಯ ಪ್ರಶ್ನೆಗಳನ್ನು ಸೇರಿಸುವುದು.

iii. ಉತ್ತೀರ್ಣರಾಗಲು ಒಟ್ಟು ಸರಾಸರಿ ಶೇ.35 ಅಂಕಗಳ ಪೈಕಿ SSLC ಲಿಖಿತ (theory) ಪರೀಕ್ಷೆಯಲ್ಲಿ ಕನಿಷ್ಠ 28 ಅಂಕಗಳನ್ನು ಗಳಿಸಬೇಕಾಗಿದ್ದು ಇದನ್ನು 20 ಅಂಕಗಳಿಗೆ ಇಳಿಸಬಹುದು.

iv. 1ನೇ ಪಿಯುಸಿ ಮತ್ತು 2ನೇ ಪಿಯುಸಿ ತರಗತಿಗಳ ನಡುವಿನ ಡ್ರಾಪ್‌ಔಟ್ ದರವನ್ನು ಕಡಿಮೆಗೊಳಿಸುವುದು.

- 2011 ರ ಜನಗಣತಿಯ ಪ್ರಕಾರ ಶೇ.90 ಕ್ಕಿಂತ ಕಡಿಮೆ ಸಾಕ್ಷರತೆ ಹೊಂದಿದ್ದು ಮತ್ತು 100% ವಯಸ್ಕ ಸಾಕ್ಷರತೆಯನ್ನು ಸಾಧಿಸಿದ ಗ್ರಾಮ ಪಂಚಾಯತ್‌ಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರೋತ್ಸಾಹಕ ಪ್ರಶಸ್ತಿಗಳನ್ನು ನೀಡಲು ಪ್ರಾರಂಭಿಸಬಹುದು.

6. **ಗ್ರಾಮೀಣ ಕೋಟಾವನ್ನು ಗ್ರಾಮೀಣ ಎಸ್‌ಎಸ್‌ಎಲ್‌ಸಿ ಬೋರ್ಡ್/ಸರ್ಕಾರಿ ಶಾಲಾ ಕೋಟಾವಾಗಿ ಮಾರ್ಪಡಿಸುವುದು–**

- ಶೇ.15 ಗ್ರಾಮೀಣ ಕೋಟಾದ ಎಂಬಿಬಿಎಸ್ ಸೀಟುಗಳಲ್ಲಿ ಶೇ.3.45 ಮಾತ್ರ ಗ್ರಾಮೀಣ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಹೋಗುತ್ತಿವೆ. 10ನೇ ತರಗತಿ ಉತ್ತೀರ್ಣರಾದ ಒಟ್ಟು ವಿದ್ಯಾರ್ಥಿಗಳ ಪೈಕಿ ಶೇ.11 ರಷ್ಟಿರುವ ಸಿಬಿಎಸ್‌ಇ ಮತ್ತು ಐಸಿಎಸ್‌ಇ ವಿದ್ಯಾರ್ಥಿಗಳು ಶೇ.48 ಸರ್ಕಾರಿ ಕೋಟಾ MBBS ಸೀಟುಗಳನ್ನು ಪಡೆಯುತ್ತಾರೆ. ಗ್ರಾಮೀಣ ಭಾಗದಲ್ಲಿ 10 ನೇ ತರಗತಿ ಉತ್ತೀರ್ಣರಾದ ಒಟ್ಟು ವಿದ್ಯಾರ್ಥಿಗಳ ಪೈಕಿ ಕೇವಲ ಶೇ.5 ರಷ್ಟಿರುವ 10ನೇ ತರಗತಿ ಉತ್ತೀರ್ಣರಾದ CBSE / ICSE ವಿದ್ಯಾರ್ಥಿಗಳು ಶೇ.51 (ಅವರ ಪ್ರಮಾಣಾನುಗುಣ ಪಾಲಿನ ಹತ್ತು ಪಟ್ಟು ಹೆಚ್ಚು) ರಷ್ಟು ಗ್ರಾಮೀಣ ಸರ್ಕಾರಿ ಕೋಟಾ MBBS ಸೀಟುಗಳನ್ನು ಪಡೆಯುತ್ತಾರೆ. ಆದ್ದರಿಂದ, ಗ್ರಾಮೀಣ ಕೋಟಾವನ್ನು ಮಾರ್ಪಡಿಸುವುದು ಸೂಕ್ತ. ಆಯ್ಕೆಗಳು ಈ ಕೆಳಗಿನಂತಿವೆ;
- **ಆಯ್ಕೆ 1** – ಸಂಪೂರ್ಣ ಶೇ.15 "ಗ್ರಾಮೀಣ ಕೋಟಾ" ವನ್ನು "ಗ್ರಾಮೀಣ ರಾಜ್ಯ ಸರ್ಕಾರಿ ಶಾಲಾ ಕೋಟಾ" ವಾಗಿ ಪರಿವರ್ತಿಸಬಹುದು.
- **ಆಯ್ಕೆ 2** – ಒಂದು ವೇಳೆ ಖಾಸಗಿ ಶಾಲಾ ಎಸ್‌ಎಸ್‌ಎಲ್‌ಸಿ ಬೋರ್ಡಿನ ವಿದ್ಯಾರ್ಥಿಗಳನ್ನು ಸಹ ಈ ಕೋಟಾದಡಿ ಪರಿಗಣಿಸುವುದಾದರೆ, ಅದನ್ನು "ಗ್ರಾಮೀಣ ಎಸ್‌ಎಸ್‌ಎಲ್‌ಸಿ ಬೋರ್ಡ್ ಸರ್ಕಾರಿ ಕೋಟಾ" ಎಂದು ಪರಿವರ್ತಿಸುವುದು.
- **ಆಯ್ಕೆ 3**– ಶೇ.15 ಗ್ರಾಮೀಣ ಕೋಟಾದಲ್ಲಿ, ಶೇ.7.5 "ಗ್ರಾಮೀಣ ಸರ್ಕಾರಿ ಶಾಲಾ ವಿದ್ಯಾರ್ಥಿ" ಗಳಿಗೆ ಮೀಸಲಿಡಬಹುದು. ಉಳಿದ ಶೇ.7.5 ಖಾಸಗಿ ಅನುದಾನಿತ, ಅನುದಾನರಹಿತ SSLC ಬೋರ್ಡ್ ಶಾಲೆ ಮತ್ತು CBSE, ICSE ಬೋರ್ಡ್ ಶಾಲಾ ವಿದ್ಯಾರ್ಥಿಗಳಿಗೆ ಮುಕ್ತವಾಗಿರಿಸಬಹುದು

7. **ಲಭ್ಯವಿರುವ ಸೌಲಭ್ಯಗಳು ಮತ್ತು ಸಂಪನ್ಮೂಲಗಳ ಉತ್ತಮ ಬಳಕೆ**

- ಬಾಲಕರ ಮತ್ತು ಬಾಲಕಿಯರ, 65 ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿಲಯಗಳನ್ನು, 193 ಸರ್ಕಾರಿ ಪಾಲಿಟೆಕ್ನಿಕ್ ವಿದ್ಯಾರ್ಥಿನಿಲಯಗಳನ್ನು ಮತ್ತು 33 ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿನಿಲಯಗಳನ್ನು ಆಯಾ ಇಲಾಖೆಯಿಂದ ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಾಗಿ ನಡೆಸಲು ಹಸ್ತಾಂತರಿಸಬಹುದು. ಇದರಿಂದ ವಿದ್ಯಾರ್ಥಿಗಳಿಗೆ ಉಚಿತ ಊಟ ಹಾಗೂ ವಸತಿ ಸೌಲಭ್ಯ ಲಭ್ಯವಾಗುತ್ತದೆ.
- ತೋಟಗಾರಿಕೆ ಇಲಾಖೆಯಲ್ಲಿ – ಕೊಯ್ಲಿನ ನಂತರದ ನಿರ್ವಹಣೆಯ ಮೇಲೆ ಆದ್ಯತೆ ನೀಡಲು "ಕೊಯ್ಲೋತ್ತರ ಕೋಶ" (ಪೋಸ್ಟ್ ಹಾರ್ವೆಸ್ಟ್ ಸೆಲ್) ಸ್ಥಾಪಿಸಬಹುದು.
- ರೇಷ್ಮೆ ಇಲಾಖೆಯಲ್ಲಿ 6 ಮಾದರಿ ಬಿತ್ತನೆ ಕೋಠಿಗಳಿವೆ. ಅದರಲ್ಲಿ 4 ಚಿತ್ರದುರ್ಗ, ಮಂಡ್ಯ, ಹಾಸನ ಮತ್ತು ತುಮಕೂರುಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಪ್ರತಿ ಮಾದರಿ ಬಿತ್ತನೆ ಕೋಠಿಯ ಉತ್ಪಾದನಾ ಸಾಮರ್ಥ್ಯವು ಸುಮಾರು 1 ಕೋಟಿ ಮೊಟ್ಟೆಗಳು. ಆದರೆ ಸಿಬ್ಬಂದಿ ಕೊರತೆ ಮತ್ತು ಇತರ ಕಾರಣಗಳಿಗಾಗಿ ವಾಸ್ತವಿಕವಾಗಿ ಉತ್ಪಾದನೆಯು ತುಂಬಾ ಕಡಿಮೆಯಾಗಿದೆ. ಮೊಟ್ಟೆ ಉತ್ಪಾದನೆಗೆ ಅಗತ್ಯವಿರುವ ಕಾರ್ಮಿಕರು, ಉತ್ತಮ ಉಪಕರಣಗಳು ಮತ್ತು ಸುಧಾರಿತ ಕೋಲ್ಡ್ ಸ್ಟೋರೇಜ್ ಸೌಲಭ್ಯವನ್ನು ಒದಗಿಸಲು ಟೆಂಡರ್ ಮೂಲಕ ಖಾಸಗಿ ಪಾಲುದಾರರನ್ನು ಪಿಪಿಪಿ ಆಧಾರದ ಮೇಲೆ ಆಯ್ಕೆ ಮಾಡಬಹುದು.
- ಮೀನುಗಾರಿಕಾ ಇಲಾಖೆಯ ಅಡಿಯಲ್ಲಿ 16 ಮೀನು ಮರಿ ಉತ್ಪಾದನಾ ಕೊಳಗಳು ಮತ್ತು 30 ಮೀನು ಸಾಕಣೆ ಕೊಳಗಳಿವೆ; ಅವುಗಳ ಉತ್ತಮ ಬಳಕೆಗಾಗಿ ಟೆಂಡರ್ ಕರೆಯುವ ಮೂಲಕ ಕೆಲವು ಕೊಳಗಳನ್ನು ಖಾಸಗಿಯವರಿಗೆ ಪಿಪಿಪಿ ಆಧಾರದ ಮೇಲೆ ಗುತ್ತಿಗೆ ನೀಡಬಹುದು
- ರಾಜ್ಯ ಸಾರ್ವಜನಿಕ ಉದ್ದಿಮೆಗಳಲ್ಲಿ ಅಪ್ರೆಂಟಿಸ್‌ಶಿಪ್ ಹುದ್ದೆಗಳ ಪ್ರಮಾಣವನ್ನು 15% ಕ್ಕೆ ಹೆಚ್ಚಿಸಬಹುದು.

## 8. ಆಡಳಿತ ಸಾಮರ್ಥ್ಯವನ್ನು ಸುಧಾರಿಸುವುದು

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯವನ್ನು ಪ್ರತ್ಯೇಕಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಎರಡು ಪ್ರತ್ಯೇಕ ನಿರ್ದೇಶನಾಲಯಗಳಾಗಿ ವಿಭಜಿಸಬಹುದು – ಒಂದು ಮಕ್ಕಳ ಅಭಿವೃದ್ಧಿ ಮತ್ತು ಇನ್ನೊಂದು ಮಹಿಳಾ ಸಬಲೀಕರಣ ಮತ್ತು ಅಭಿವೃದ್ಧಿಗಾಗಿ.

- ರಾಜ್ಯದಲ್ಲಿ ಈಗ 282 ನಗರ ಸ್ಥಳೀಯ ಸಂಸ್ಥೆಗಳಿವೆ. ಅವುಗಳಲ್ಲಿ 26 ರಲ್ಲಿ ಮಾತ್ರ ನಗರ ಗ್ರಂಥಾಲಯ ಪ್ರಾಧಿಕಾರಗಳಿವೆ. ಇತರ ನಗರ ಸ್ಥಳೀಯ ಸಂಸ್ಥೆಗಳ ಗ್ರಂಥಾಲಯಗಳ ಉಸ್ತುವಾರಿಯನ್ನು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವು ವಹಿಸುತ್ತದೆ. ರಾಜ್ಯದಲ್ಲಿ ಬಾಕಿ ಉಳಿಯುವ 256 ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ನಗರ ಗ್ರಂಥಾಲಯ ಪ್ರಾಧಿಕಾರಗಳನ್ನು ಸ್ಥಾಪಿಸಲು, ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯಿದೆ 1965 ಕ್ಕೆ ತಿದ್ದುಪಡಿ ಮಾಡುವುದರಿಂದ ನಗರ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸಲು ಅನುಕೂಲವಾಗುತ್ತದೆ.

- ಎಲ್ಲಾ ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಡಳಿತಾಧಿಕಾರಿಯ ಅಡಿಯಲ್ಲಿ ಕಾರ್ಯನಿರ್ವಹಿಸುವ "ಆಸ್ಪತ್ರೆ ವ್ಯವಸ್ಥಾಪಕರ" ಹುದ್ದೆಯನ್ನು ಸೃಜಿಸುವುದು. ಈ ಹುದ್ದೆಗೆ ಆಸ್ಪತ್ರೆ ಮ್ಯಾನೇಜ್‌ಮೆಂಟ್ ಪದವಿ ಹೊಂದಿರುವ ಪದವೀಧರರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಬಹುದು.

- ಎಎನ್‌ಎಂ ಗಳು ಮತ್ತು ಪುರುಷ ಆರೋಗ್ಯ ಕಾರ್ಯಕರ್ತರು ದ್ವಿ–ಚಕ್ರ ವಾಹನಗಳನ್ನು ಖರೀದಿಸಲು ಶೇ.50 ಬಂಡವಾಳ ಸಬ್ಸಿಡಿಯನ್ನು (ಆದ್ಯತೆ ಎಲೆಕ್ಟ್ರಿಕ್ ವಾಹನ) ನೀಡಬಹುದು. ಅಂದರೆ ಇದಕ್ಕಾಗಿ ತಗಲುವ ಒಟ್ಟು ವೆಚ್ಚ ರೂ.20 ಕೋಟಿ.

- ಹೆಚ್ಚಿನ ಕೆಲಸದ ಹೊರೆ ಹೊಂದಿರುವ 100 ಹಾಸಿಗೆಗಳ ಸಾಮರ್ಥ್ಯದ ತಾಲೂಕು ಆಸ್ಪತ್ರೆಗಳಲ್ಲಿ GNM ಅಥವಾ B.Sc ನರ್ಸಿಂಗ್ ಕೋರ್ಸ್‌ಗಳನ್ನು 20 ಸೀಟ್‌ಗಳೊಂದಿಗೆ ನರ್ಸಿಂಗ್ ಕಾಲೇಜನ್ನು ಹಾಗೂ 10 ಪ್ಯಾರಾಮೆಡಿಕಲ್ ಸೀಟುಗಳೊಂದಿಗೆ ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ಪ್ರಾರಂಭಿಸುವುದು. ಇವುಗಳನ್ನು ಸದ್ಯಕ್ಕೆ ಬಾಡಿಗೆ ಆವರಣದಲ್ಲಿ ಪ್ರಾರಂಭಿಸಬಹುದು.

- ಜಿಲ್ಲಾ ಮಟ್ಟದಲ್ಲಿ ಇ–ಆಫೀಸ್ ಅನ್ನು ಸಂಪೂರ್ಣವಾಗಿ ಬಳಸುವ ಇಲಾಖೆಗಳಲ್ಲಿ ದ್ವಿತೀಯ ದರ್ಜೆ ಸಹಾಯಕರ ಹಲವು ಹುದ್ದೆಗಳನ್ನು ತಾಂತ್ರಿಕ ಹುದ್ದೆಗಳಾಗಿ ಪರಿವರ್ತಿಸಬಹುದು, ಉದಾ. ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆಯಲ್ಲಿ.

## 9. ಕರ್ನಾಟಕ ಲೋಕಸೇವಾ ಆಯೋಗ (ಕೆ.ಪಿ.ಎಸ್.ಸಿ)

- ಲೋಕಸೇವಾ ಆಯೋಗಗಳ ಪೈಕಿ ಕೇರಳ ರಾಜ್ಯವು ಜಿಲ್ಲಾ ಮಟ್ಟದ ಪ್ರಾದೇಶಿಕ ಕಚೇರಿಗಳನ್ನು ಹೊಂದಿದ್ದು ಇದನ್ನು ಹೊರತುಪಡಿಸಿ, ಉತ್ತರ ಪ್ರದೇಶವೂ ಸೇರಿದಂತೆ ಇತರ ರಾಜ್ಯಗಳಲ್ಲಿ ಸದಸ್ಯರ ಸಂಖ್ಯೆ 8 ಅಥವಾ ಅದಕ್ಕಿಂತ ಕಡಿಮೆ ಇರುತ್ತಾರೆ. ಆದುದರಿಂದ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಸೇರಿದಂತೆ ಸದಸ್ಯರ ಸಂಖ್ಯೆಯನ್ನು 14 ರಿಂದ 8 ಕ್ಕೆ ಇಳಿಸಲು ಶಿಫಾರಸು ಮಾಡಲಾಗಿದೆ.

- ನೇಮಕಾತಿಗೆ ಮೊದಲು ಆಯೋಗವು ದಾಖಲಾತಿಗಳ ನೈಜತೆಯನ್ನು ಪರಿಶೀಲನೆ ಮಾಡುವುದನ್ನು ಕೈಬಿಟ್ಟು ಸಂಬಂಧಿಸಿದ ಇಲಾಖೆಗಳು ದಾಖಲೆಗಳ ನೈಜತೆ ಪರಿಶೀಲನೆ ಮಾಡುವುದರಿಂದ ಆಯ್ಕೆಯನ್ನು ತ್ವರಿತಗೊಳಿಸಬಹುದು.

## 10. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)

- BBMP – 30 ಬಿಬಿಎಂಪಿ ಕಂದಾಯ ವಿಭಾಗಗಳಿಗೆ ವಿಕೇಂದ್ರೀಕರಣಕ್ಕಾಗಿ ಹಾಗೂ ಹೆಚ್ಚಿನ ಸಮನ್ವಯ ಸಾಧಿಸಲು ಕೆಎಎಸ್ ಗ್ರೂಪ್–ಎ ಹಿರಿಯ ಶ್ರೇಣಿಯ 30 ಉಪ ಆಯುಕ್ತರ ಹುದ್ದೆಗಳನ್ನು ಬಿಬಿಎಂಪಿಯಲ್ಲಿ ಸೃಜಿಸಬಹುದು. ಸದರಿ ಕೆಎಎಸ್ ಗ್ರೂಪ್–ಎ ಹಿರಿಯ ಶ್ರೇಣಿಯ ಅಧಿಕಾರಿಗಳು ಬಿಬಿಎಂಪಿ ಕಂದಾಯ

ಅಧಿಕಾರಿಗಳು, ಕಾರ್ಯನಿರ್ವಾಹಕ ಎಂಜಿನಿಯರ್‌ಗಳು, ವಿಭಾಗೀಯ ಆರೋಗ್ಯ ಅಧಿಕಾರಿಗಳು, BWSSB, ಬೆಸ್ಕಾಂ, ಬಿಎಂಟಿಸಿ ಮತ್ತು ಇತರ ರಾಜ್ಯ ಮತ್ತು ಕೇಂದ್ರ ಸಂಸ್ಥೆಗಳು ಮತ್ತು ಇಲಾಖೆಗಳ ಅಧಿಕಾರಿಗಳೊಂದಿಗೆ ಹೆಚ್ಚಿನ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ. ಈ ಹುದ್ದೆಗಳನ್ನು ಭಾಗಶ: ರಾಜ್ಯ ಸರ್ಕಾರದಿಂದ ಕೆಎಎಸ್ ಗ್ರೂಪ್–ಎ ಹಿರಿಯ ಶ್ರೇಣಿಯ ಅಧಿಕಾರಿಗಳನ್ನು ನಿಯೋಜಿಸುವ ಮೂಲಕ ಮತ್ತು ಭಾಗಶಃ ಬಿಬಿಎಂಪಿ ಕಂದಾಯ ಅಧಿಕಾರಿಗಳನ್ನು ಬಡ್ತಿ ನೀಡಿ ತುಂಬಬಹುದು.

## 11. ಇಲಾಖೆಗಳ ವಿಲೀನ

- ಉದ್ಯೋಗ ಸೇವಾ ಇಲಾಖೆಯಯನ್ನು ಕೌಶಲ್ಕರ್ ಮಿಷನ್‌ನೊಂದಿಗೆ ವಿಲೀನಗೊಳಿಸಬಹುದು. ಉದ್ಯೋಗ ಸೇವಾ ಇಲಾಖೆಯ ಸಿಬ್ಬಂದಿ ಮತ್ತು ಮೂಲ ಸೌಕರ್ಯಗಳನ್ನು ರಾಜ್ಯ ಕೌಶಲ್ಯ ಮಿಷನ್‌ನೊಂದಿಗೆ ವಿಲೀನಗೊಳಿಸಬಹುದು ಮತ್ತು ಅದನ್ನು ರಾಜ್ಯ ಕೌಶಲ್ಯ ಮತ್ತು ಉದ್ಯೋಗ ಮಿಷನ್ ಎಂದು ಮರುನಾಮಕರಣ ಮಾಡಬಹುದು. ಇದಕ್ಕೆ ಅನುಗುಣವಾಗಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಪದನಾಮದಲ್ಲಿ ಉದ್ಯೋಗ ಎಂಬ ಪದವನ್ನು ತೆಗೆದುಹಾಕಿ 'ಕೈಗಾರಿಕಾ ತರಬೇತಿ ಇಲಾಖೆ' ಎಂದು ಮರುನಾಮಕರಣ ಮಾಡಬಹುದು.

## 12. ಜಾರಿಯನ್ನು (Enforcement) ಸುಧಾರಿಸುವುದು

- ಕಾರ್ಮಿಕ ಇಲಾಖೆಯ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆಗಳಂತಹ, 4 ರಾಜ್ಯ ಕಾಯಿದೆಗಳಿಗೆ ಸಂಬಂಧಿಸಿದಂತೆ, ದಂಡ ಮತ್ತು ಶಿಕ್ಷೆಗಳನ್ನು ಹಣದುಬ್ಬರ ದೃಷ್ಟಿಯಿಂದ ಹಾಗೂ ಜಾರಿಯನ್ನು ಪರಿಣಾಮಕಾರಿಯಾಗಿಸಲು ಅವುಗಳ ಪರಿಷ್ಕರಣೆಯ ಅಗತ್ಯವಿದೆ.

  i. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿ ಮಾಡಿದ ಠೇವಣಿಗಳಿಗೆ ಶೇ.0.1 ರಂತೆ ವಂತಿಗೆಯೊಂದಿಗೆ ಕರ್ನಾಟಕ ಸಹಕಾರಿ ಕ್ರೆಡಿಟ್ ಗ್ಯಾರಂಟಿ ಫಂಡ್ ರೂಪಿಸಬಹುದು. ಇದರಿಂದ ರೂ.2 ಲಕ್ಷದವರೆಗೆ ಠೇವಣಿಗಳ ಭದ್ರತೆ ನೀಡಬಹುದು.

  ii. ಗಂಭೀರ ವಂಚನೆಗಳನ್ನು ತಡೆಗಟ್ಟಲು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿರವರ ಅಧೀನದಲ್ಲಿ SFIO (Serious Fraud Investigation Office) ನ್ನು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ ಮತ್ತು ಸೌಹಾರ್ದ ಸಹಕಾರಿ ಕಾಯಿದೆಯಲ್ಲಿ ಸೂಕ್ತವಾದ ಶಾಸನಬದ್ಧ ನಿಬಂಧನೆಗಳನ್ನು ಮಾಡುವ ಮೂಲಕ ಸ್ಥಾಪಿಸಬಹುದು.

  iii. ಕರ್ನಾಟಕ ರಾಜ್ಯ ಸಹಕಾರಿ ಚುನಾವಣಾ ಪ್ರಾಧಿಕಾರವನ್ನು ರದ್ದುಗೊಳಿಸಬಹುದು; ಈ ಹಿಂದೆ ಇದ್ದಂತೆ ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿನ ಅಪರ ನಿಬಂಧಕರ ನೇತೃತ್ವದಲ್ಲಿ ಪ್ರತ್ಯೇಕ ಚುನಾವಣಾ ಕೋಶವನ್ನು ಸೃಜಿಸಬಹುದು.

  iv. ನಿಷ್ಕ್ರಿಯ ಸಂಘಗಳ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು/ವಿಲೇವಾರಿ ಮಾಡಲು ಮತ್ತು ಸಾಲಗಾರರ ಬಾಕಿಗಳನ್ನು ಇತ್ಯರ್ಥಗೊಳಿಸಲು ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ ಸರ್ಕಾರಿ ಸ್ವಾಮ್ಯದ ಸ್ವತ್ತುಗಳ ಪುನರ್ ನಿರ್ಮಾಣ ಕಂಪನಿ ಅಥವಾ ಕೋಶವನ್ನು ಸ್ಥಾಪಿಸಬಹುದು.

  v. ಸ್ವತ್ತುಗಳ ಮೋಸದ/ವಂಚನೆ ನೋಂದಣಿಗಳ ಸಂದರ್ಭದಲ್ಲಿ, ಬಾಧಿತ ಮಾಲೀಕರಿಗೆ ಪರಿಹಾರ ನೀಡಲು ಮತ್ತು ಸಿವಿಲ್ ನ್ಯಾಯಾಲಯಗಳ ಮೇಲಿನ ಪ್ರಕರಣದ ಹೊರೆಯನ್ನು ಕಡಿಮೆ ಮಾಡಲು ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲು ತಮಿಳುನಾಡು ಮತ್ತು ಹರಿಯಾಣ ರಾಜ್ಯಗಳು ಮಾಡಿದ ತಿದ್ದುಪಡಿಗಳ ರೀತಿಯಲ್ಲಿ 1908 ರ ನೋಂದಣಿ ಕಾಯಿದೆಗೆ ತಿದ್ದುಪಡಿಯನ್ನು ಕಂದಾಯ ಇಲಾಖೆ ಪ್ರಸ್ತಾಪಿಸಬಹುದು.

**13. ಕಾರ್ಯವಿಧಾನಗಳ ಸರಳೀಕರಣ**

- ಕುಟುಂಬ ಹಾಗೂ ಫ್ರೂಟ್ಸ್ ದತ್ತಾಂಶವಿರುವುದರಿಂದ ಅನೇಕ ದಾಖಲೆಗಳನ್ನು ಅರ್ಜಿದಾರರಿಂದ ಕೇಳಬೇಕಾಗಿಲ್ಲ. ಇಂತಹ ದಾಖಲೆಗಳನ್ನು ಕೇಳುವುದನ್ನು ಸಂಬಂಧಿತ ಮಾರ್ಗಸೂಚಿಗಳು, ಸರ್ಕಾರಿ ಆದೇಶಗಳು, ಅರ್ಜಿ ನಮೂನೆಗಳು, ಪರಿಶೀಲನಾ ಪಟ್ಟಿಗಳು (ಚೆಕ್ ಲಿಸ್ಟ್), ಸುತ್ತೋಲೆಗಳು ಇತ್ಯಾದಿಗಳಿಂದ ತೆಗೆದುಹಾಕಬಹುದು. ಉದಾ. ಪಿಎಂಕೆಎಸ್‌ವೈ (ಎಂಐ) ಯೋಜನೆ ಅರ್ಜಿದಾರರು ತೋಟಗಾರಿಕೆ ಇಲಾಖೆಗೆ 3 ಸೆಟ್‌ಗಳಲ್ಲಿ 31 ದಾಖಲೆಗಳನ್ನು (ಖಜಾನೆ, ಆರ್‌ಎಸ್‌ಕೆ ಮತ್ತು ಸಹಾಯಕ ನಿರ್ದೇಶಕರ ಕಚೇರಿಗೆ) ಒದಗಿಸಬೇಕು. ವರದಿಯಲ್ಲಿ ಪ್ರತಿ ಇಲಾಖೆಯಡಿ ಯೋಜನೆಗಳಿಂದ ಕೈಬಿಡಬಹುದಾದ ದಾಖಲೆಗಳ ಪಟ್ಟಿ ನೀಡಲಾಗಿದೆ.

- ಗ್ರಾಮೀಣ ವ್ಯಾಸಂಗ ಪ್ರಮಾಣಪತ್ರ, ಕನ್ನಡ ಮಾಧ್ಯಮ ಪ್ರಮಾಣಪತ್ರ ಮತ್ತು ಹೆಚ್‌ಕೆ (ಹೈದ್ರಾಬಾದ್ ಕರ್ನಾಟಕ) ನಿವಾಸ ಪ್ರಮಾಣಪತ್ರ, ಹೆಚ್‌ಕೆ ಅರ್ಹತಾ ಪ್ರಮಾಣಪತ್ರದ ಸಿಂಧುತ್ವವನ್ನು ಪ.ಜಾತಿ ಮತ್ತು ಪ.ಪಂ. ಪ್ರಮಾಣ ಪತ್ರಗಳಂತೆ ಜೀವಿತಾವಧಿಯವರೆಗೆ ಅಥವಾ ಸಿಂಧುತ್ವ ರದ್ದುಗೊಳಿಸುವವರೆಗೆ ವಿಸ್ತರಿಸಬಹುದು.

- ಫಲಾನುಭವಿ ಆಧಾರಿತ ಯೋಜನೆಗಳ ಮೊದಲ ಮತ್ತು ಎರಡನೇ ಹಂತಗಳ ಅನುದಾನ ನೀಡಲು ಫಲಾನುಭವಿಯು ಕಳುಹಿಸಿದ ಸ್ವಯಂ ಪ್ರಮಾಣೀಕೃತ ಭಾವಚಿತ್ರಗಳನ್ನು ಪರಿಗಣಿಸಬಹುದು. ಕಾಮಗಾರಿ ಮುಗಿದ ನಂತರ ಅಂತಿಮ ಹಂತದ ಭಾವಚಿತ್ರಗಳನ್ನು ಮಾತ್ರ ಇಲಾಖಾ ಅಧಿಕಾರಿಗಳಿಂದ ತೆಗೆದುಕೊಳ್ಳಬಹುದು.

- ಅತಿ ಕಡಿಮೆ ವಹಿವಾಟು ನಡೆಸುವ ಸಂಘಗಳಿಗೆ ಕಾರ್ಯವಿಧಾನಗಳನ್ನು ಸರಳಗೊಳಿಸುವ ಅಗತ್ಯವಿದೆ. 5 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ವಹಿವಾಟು ಹೊಂದಿರುವ ಸಂಘಗಳು 5 ವರ್ಷಗಳಿಗೊಮ್ಮೆ ಲೆಕ್ಕಪತ್ರಗಳನ್ನು ಸಲ್ಲಿಸಲು ಅವಕಾಶ ನೀಡಲು ಹಾಗೂ ಚಾರ್‌ಟರ್ಡ್ ಅಕೌಂಟೆಂಟ್‌ರಿಂದ ಲೆಕ್ಕ ಪರಿಶೋಧನೆ ಮಾಡಿಸುವ ಅಗತ್ಯವಿಲ್ಲ, ಲೆಕ್ಕ ಪತ್ರಗಳ ಸ್ವಯಂ ಘೋಷಣೆಯನ್ನು ಸ್ವೀಕರಿಸಬಹುದು ಎಂದು ಶಿಫಾರಸು ಮಾಡಿದೆ.

**14. ಸಾದಿಲ್ವಾರು ವೆಚ್ಚಗಳಿಗೆ ವಾಸ್ತವಿಕ ಅನುದಾನವನ್ನು ಒದಗಿಸುವುದು**

- ಅಂಗನವಾಡಿ, ಶೌಚಾಲಯ ನಿರ್ವಹಣೆ ಮತ್ತು ಶುಚಿಗೊಳಿಸುವಿಕೆ/ಗುಡಿಸಲು ಉಪಯೋಗಿಸುವ ವಸ್ತುಗಳಿಗೆ ತಿಂಗಳಿಗೆ ರೂ.83 (ವರ್ಷಕ್ಕೆ ರೂ.1000/-) ನೀಡಲಾಗುತ್ತಿದ್ದು, ಅದನ್ನು ತಿಂಗಳಿಗೆ ರೂ.200ಕ್ಕೆ ಹೆಚ್ಚಿಸಬಹುದು.

- ಶಾಲಾ ಶುಚಿಗೊಳಿಸುವ ಶುಲ್ಕವನ್ನು ವಿದ್ಯಾರ್ಥಿಗಳ ಸಂಖ್ಯಾಬಲದ ಆಧಾರದ ಮೇಲೆ ಹೆಚ್ಚಿಸಬಹುದು. ಪ್ರೌಢಶಾಲೆಗಳಿಗೆ ವಾರ್ಷಿಕ ರೂ.9,000/- ಹೆಚ್‌ಪಿಎಸ್‌ಗೆ ರೂ.8,000 ಮತ್ತು ಎಲ್‌ಪಿಎಸ್‌ಗೆ ರೂ.6,500 ಗಳಂತೆ ನೀಡುವ ಅನುದಾನ ಹೆಚ್ಚಿಸಿ; 1-30 ವಿದ್ಯಾರ್ಥಿಗಳ ಸಂಖ್ಯಾ ಬಲಕ್ಕೆ ಮಾಸಿಕ ರೂ.1000, 31-100 ವಿದ್ಯಾರ್ಥಿಗಳ ಸಂಖ್ಯಾ ಬಲಕ್ಕೆ ಮಾಸಿಕ ರು.2000, 101-250 ಕ್ಕೆ ಮಾಸಿಕ ರೂ.3000, 251-1000ಕ್ಕೆ ಮಾಸಿಕ ರೂ.4000 ಮತ್ತು 1000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಮಾಸಿಕ ರೂ.5000/- ಕ್ಕೆ ಪರಿಷ್ಕರಿಸಬಹುದು.

- ಶಾಲಾ ಅನುದಾನವನ್ನು ದ್ವಿಗುಣಗೊಳಿಸಿ ಸಣ್ಣ ಶಾಲೆಗಳಿಗೆ ವಾರ್ಷಿಕ ರೂ.20,000, 31-100 ವಿದ್ಯಾರ್ಥಿಗಳಿರುವ ಶಾಲೆಗಳಿಗೆ ರೂ.50,000, 101-250 ವಿದ್ಯಾರ್ಥಿಗಳಿರುವ ಶಾಲೆಗಳಿಗೆ ರೂ.1 ಲಕ್ಷ, 251-1000 ಇರುವ ಶಾಲೆಗಳಿಗೆ ರೂ.1.50 ಲಕ್ಷ, 1000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ ವಾರ್ಷಿಕ ರೂ.2 ಲಕ್ಷಗಳನ್ನು ರಾಜ್ಯ ಆಯವ್ಯಯದಿಂದ ಪೂರಕವಾಗಿ ನೀಡಬಹುದು.

- ಶಾಲೆಗಳು, ಕಾಲೇಜುಗಳು, ಪ್ರಾ.ಆ.ಕೇ.ಗಳು, ಆಸ್ಪತ್ರೆಗಳು, ಐಟಿಐಗಳು, ಪಾಲಿಟೆಕ್ನಿಕ್‌ಗಳು ಮತ್ತು ಅಂತಹುದೇ ಮುಂಚೂಣಿ ಕಚೇರಿಗಳು ಮತ್ತು ಸಂಸ್ಥೆಗಳ ಅನುದಾನದಲ್ಲಿ "ಹೌಸ್ ಕೀಪಿಂಗ್ ಮತ್ತು ಶುಚಿತ್ವ ವೆಚ್ಚಗಳಿಗಾಗಿ" ಹಣಕಾಸು ಇಲಾಖೆಯು ಅನುದಾನ ಹಂಚಿಕೆಯೊಂದಿಗೆ ಒಂದು ಪ್ರತ್ಯೇಕ ಲೆಕ್ಕ ಶೀರ್ಷಿಕೆಯನ್ನು ಒದಗಿಸಬಹುದು.

**15. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಶಕ್ತೀಕರಣ**

1. ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರ ಎಂದು ಗೊತ್ತುಪಡಿಸಬಹುದು: ಹಾಗೆ ಮಾಡುವ ಮೂಲಕ, ಕೆಸಿಎಸ್ (ಸಿಸಿಎ) ನಿಯಮಗಳು, 1957 ಅಡಿಯಲ್ಲಿ ಶಿಸ್ತಿನ ಪ್ರಕರಣಗಳು ಸೇರಿದಂತೆ ಎಲ್ಲಾ ಸೇವಾ ವಿಷಯಗಳಾದ ಪ್ರೊಬೇಷನ್ ಘೋಷಣೆ, ಪ್ರಭಾರ ಭತ್ಯೆಯ ಪಾವತಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ತ್ವರಿತವಾಗಿ ಇತ್ಯರ್ಥಪಡಿಸಬಹುದು. KCS (CCA) ನಿಯಮಗಳು, 1957 ಅನ್ನು ಎಲ್ಲಾ ಇಲಾಖೆಗಳು ತಿದ್ದುಪಡಿ ಮಾಡುವುದು ಸಮಯ ತೆಗೆದುಕೊಳ್ಳುವ ಪ್ರಕ್ರಿಯೆಯಾಗಿರುವುದರಿಂದ, ಈ ತಿದ್ದುಪಡಿಯನ್ನು ಮಾಡುವವರೆಗೆ, ವರದಿಯಲ್ಲಿ ಶಿಫಾರಸು ಮಾಡಿದಂತೆ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು.

2. ಸಂಬಂಧಿತ ಇಲಾಖೆಗಳ ನಿರ್ದಿಷ್ಟಪಡಿಸಿದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಈ ಕೆಳಗಿನ ಅಧಿಕಾರಗಳನ್ನು ಪ್ರತ್ಯಾಯೋಜಿಸುವ ಕುರಿತು ವರದಿಯಲ್ಲಿ ಶಿಫಾರಸುಗಳನ್ನು ಮಾಡಿದೆ. ಉದಾ. ಕ್ಷೇತ್ರ ಶಿಕ್ಷಣ ಅಧಿಕಾರಿಗಳಿಗೆ ಈ ಕೆಳಗಿನ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು.

    ಎ. ಪ್ರೌಢಶಾಲಾ ಶಿಕ್ಷಕರಿಗೆ ಕಾಲಮಿತಿ ವೇತನ ಬಡ್ತಿ ಮತ್ತು ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವುದು.

    ಬಿ. ಪ್ರೌಢಶಾಲಾ ಶಿಕ್ಷಕರನ್ನು ಮುಖ್ಯೋಪಾಧ್ಯಾಯರ ಹುದ್ದೆಗೆ ಪ್ರಭಾರಿಯಾಗಿರಿಸುವುದು ಮತ್ತು ಅವರಿಗೆ ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವುದು.

    ಸಿ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಜಿಪಿಎಫ್ ನಿಂದ ಭಾಗಶಃ ಜಿಪಿಎಫ್ ಹಿಂಪಡೆಯುವಿಕೆ ಮತ್ತು ಸಾಲವನ್ನು ಮಂಜೂರು ಮಾಡುವುದು.

   ಪದವಿ ಪೂರ್ವ ಕಚೇರಿಯ ಉಪ ನಿರ್ದೇಶಕರನ್ನು, ಅವರ ಕಚೇರಿಯ ಮತ್ತು ಜಿಲ್ಲೆಯ ಸರ್ಕಾರಿ ಪಿಯು ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುವ ಪ್ರ.ದ.ಸ.ಗಳು, ದ್ವಿ.ದ.ಸ.ಗಳು, ಬೆರಳಚ್ಚುಗಾರರು, ಚಾಲಕರು ಮತ್ತು ಗ್ರೂಪ್-ಡಿ ನೌಕರರ ನೇಮಕಾತಿ ಪ್ರಾಧಿಕಾರವಾಗಿ ಅಧಿಸೂಚಿಸಿ ಕೆಳಗಿನ ಅಧಿಕಾರವನ್ನು ಪ್ರತ್ಯಾಯೋಜಿಸಬಹುದು.

    ಎ. ಜಿಲ್ಲೆಯಲ್ಲಿನ ಗ್ರೂಪ್ ಸಿ, ಡಿ ಸಿಬ್ಬಂದಿ ಮತ್ತು ಉಪನ್ಯಾಸಕರುಗಳಿಗೆ ಕಾಲಮಿತಿ ವೇತನ ಬಡ್ತಿ ಮತ್ತು ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವುದು.

    ಬಿ. ಪದವಿ ಪೂರ್ವ ಅನುದಾನಿತ ಕಾಲೇಜುಗಳ ಉಪನ್ಯಾಸಕರುಗಳಿಗೆ ಕಾಲಮಿತಿ ವೇತನ ಬಡ್ತಿ ಮತ್ತು ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವುದು.

   ITI ಗಳ ಪ್ರಾಂಶುಪಾಲರಿಗೆ 'ಸಿ' ಮತ್ತು 'ಡಿ' ವೃಂದದ ಸಿಬ್ಬಂದಿಯ ಕಾಲಮಿತಿ ಮತ್ತು ಸ್ಥಗಿತ ವೇತನ ಬಡ್ತಿ ಮಂಜೂರು ಮಾಡುವ ಅಧಿಕಾರವನ್ನು ಪ್ರತ್ಯಾಯೋಜಿಸಬಹುದು.

3. ರಾಷ್ಟ್ರೀಯ ಆರೋಗ್ಯ ಅಭಿಯಾನ (NHM) ಹಾಗೂ ಇತರೆ ಯೋಜನೆಗಳ ಅಡಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಆಸ್ಪತ್ರೆ, ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಗುತ್ತಿಗೆ ಸಿಬ್ಬಂದಿಗಳಿಗೆ ಜಿಲ್ಲಾ ಆರೋಗ್ಯ ಅಧಿಕಾರಿಗಳ ಕಛೇರಿಯ ಬದಲಾಗಿ ಆಯಾ ಸಂಸ್ಥೆಯ ವೈದ್ಯಕೀಯ ಅಧಿಕಾರಿಗಳು ಸಂಬಳ ಮತ್ತು ಪ್ರೋತ್ಸಾಹಧನವನ್ನು ಪಾವತಿಸಲು ಪ್ರತ್ಯಾಯೋಜಿಸಬಹುದು.

4. ಗ್ರೂಪ್-ಸಿ ಮತ್ತು ಡಿ ಸಿಬ್ಬಂದಿಗೆ ಕಾಲಮಿತಿ ವೇತನ ಬಡ್ತಿಯನ್ನು ಮಂಜೂರು ಮಾಡಲು ಜಿಲ್ಲಾ ತೋಟಗಾರಿಕಾ ಉಪನಿರ್ದೇಶಕರವರಿಗೆ ಹಾಗೂ ಗುಂಪು-ಬಿ ಸಿಬ್ಬಂದಿಗೆ ಮಂಜೂರು ಮಾಡಲು ವಿಭಾಗೀಯ ತೋಟಗಾರಿಕಾ ಜಂಟಿ ನಿರ್ದೇಶಕರವರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಬಹುದು.

5. ವರದಿಯಲ್ಲಿನ ವಿವರಗಳ ಪ್ರಕಾರ ವಿಭಾಗೀಯ JRCS, ಜಿಲ್ಲಾ DRCS ಮತ್ತು ARCS ಗಳಿಗೆ ಶಾಸನಬದ್ಧ ಅಧಿಕಾರಗಳ ಪ್ರತ್ಯಾಯೋಜನೆ ಮಾಡುವುದು.

## 16. ಪಾಲುದಾರರ ಭಾಗವಹಿಸುವಿಕೆ

6. ಸಂಸ್ಥೆ ನಿರ್ವಹಣಾ ಸಮಿತಿಗಳನ್ನು (IMC) ಎಲ್ಲಾ ITI ಗಳಲ್ಲಿ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಸೂಕ್ತ ಉದ್ದಿಮೆ ಪ್ರತಿನಿಧಿಗಳೊಂದಿಗೆ ಮತ್ತು ಹಣಕಾಸಿನ ಅಧಿಕಾರಗಳೊಂದಿಗೆ ರಚಿಸಬಹುದು.
7. ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಚುನಾಯಿತ ಪ್ರತಿನಿಧಿಗಳು, ಪ್ರಗತಿಪರ ರೈತರು, ಪುರಸ್ಕೃತ ರೈತರು, ಕಂದಾಯ, ತೋಟಗಾರಿಕೆ, ಅರಣ್ಯ, ಸಂಪರ್ಕ ವಿಜ್ಞಾನಿ ಮುಂತಾದ ಸಂಬಂಧಿತ ಇಲಾಖೆಗಳ ಅಧಿಕಾರಿಗಳೊಂದಿಗೆ ರೈತ ಸಲಹಾ ಸಮಿತಿಯನ್ನು ಸ್ಥಾಪಿಸಬಹುದು.
8. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿರುವ ಆರೋಗ್ಯ ರಕ್ಷಾ ಸಮಿತಿ (ARS) ಮಾದರಿಯಲ್ಲಿ ಪ್ರಾಣಿ ವೈದ್ಯ ಸಮಿತಿಗಳು ಅಥವಾ ಪ್ರಾಣಿ ಆರೋಗ್ಯ ರಕ್ಷಾ ಸಮಿತಿಗಳನ್ನು ಪ್ರತಿ ಪ್ರಾಥಮಿಕ ಪಶುವೈದ್ಯ ಕೇಂದ್ರಗಳಿಗೆ, ಪಶುವೈದ್ಯ ಚಿಕಿತ್ಸಾಲಯಗಳಿಗೆ, ತಾಲೂಕು ಪಶುವೈದ್ಯ ಆಸ್ಪತ್ರೆ ಮತ್ತು ಪಶುವೈದ್ಯ ಪಾಲಿಕ್ಲಿನಿಕ್‌ಗಳಿಗೆ ಸ್ಥಾಪಿಸಬಹುದು.
9. ತ್ವರಿತವಾಗಿ ಕರಡು ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮಸೂದೆ 2020 ನ್ನು ಅಂತಿಮಗೊಳಿಸಬಹುದು.
10. ನಿರಂತರ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ಪ್ರತಿ ಸರ್ಕಾರಿ ಕಛೇರಿಯಲ್ಲಿ "ಕಾರ್ಯ ಸುಧಾರಣಾ ತಂಡ" ಗಳನ್ನು ರಚಿಸುವುದು.

## 17. ಉತ್ತಮ ಆಡಳಿತಕ್ಕಾಗಿ ಮಾಹಿತಿ ತಂತ್ರಜ್ಞಾನವನ್ನು ಬಳಸುವುದು

1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರ ಕಚೇರಿಯಲ್ಲಿ ಸುಮಾರು 100 ಡೇಟಾಬೇಸ್ ಅಡ್ಮಿನ್, ಸಿಸ್ಟಮ್ ಅಡ್ಮಿನ್, ಡೇಟಾ ವಿಶ್ಲೇಷಕರು, ಡೆವಲಪರ್‌ಗಳು ಮತ್ತು ತರಬೇತುದಾರರೊಂದಿಗೆ IT ಕೋಶವನ್ನು ಬಲಪಡಿಸುವುದು.
2. ರೇಷ್ಮೆ ಗೂಡು ಹರಾಜು ಕೇಂದ್ರದ ಇ–ಮಾರ್ಕೆಟಿಂಗ್ ಮಾರಾಟದ ಮಾಹಿತಿಯನ್ನು ರೈತರ ಫ್ರೂಟ್ಸ್ ID ಯೊಂದಿಗೆ ಲಿಂಕ್ ಮಾಡುವುದರ ಮೂಲಕ ರೇಷ್ಮೇ ಇಲಾಖೆಯು ನೀಡುವ ಪ್ರೋತ್ಸಾಹಕ ಮೊತ್ತವನ್ನು ನೇರವಾಗಿ ಡಿಬಿಟಿ ಮೂಲಕ ಆಯಾ ಮಾರಾಟಗಾರರ ಬ್ಯಾಂಕ್ ಖಾತೆಗೆ ವರ್ಗಾಯಿಸಲು ವ್ಯವಸ್ಥೆ ಮಾಡುವುದು.
3. ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಬಯಸುವ ರೈತರಿಗೆ ಬೆಲೆ ಮಾಹಿತಿಯು ಅವಶ್ಯಕವಾಗಿದೆ. ಮಾರುಕಟ್ಟೆ ಪ್ರಾಂಗಣದ ಒಳಗೆ ನಡೆಯುವ ವಹಿವಾಟಿನ ಬಗ್ಗೆ ಬೆಲೆ ಮಾಹಿತಿ ಸುಲಭವಾಗಿ ಲಭ್ಯವಿದ್ದರೂ, ಮಾರುಕಟ್ಟೆ ಪ್ರಾಂಗಣದ ಹೊರಗೆ ನಡೆಯುವ ವಹಿವಾಟುಗಳ ಮಾಹಿತಿಯನ್ನು ಪಡೆಯಲು ಮತ್ತು ಹಂಚಿಕೊಳ್ಳಲು ಯಾವುದೇ ವ್ಯವಸ್ಥೆ ಇಲ್ಲ. ಮೂರನೇ ಒಂದು ಭಾಗದಷ್ಟು ವ್ಯಾಪಾರವನ್ನು ಮಾರುಕಟ್ಟೆಯ ಪ್ರಾಂಗಣದ ಹೊರಗೆ ನಡೆಸಲಾಗುತ್ತಿದೆ ಎಂದು ತಿಳಿಸಲಾಗಿದೆ. ಮಾರುಕಟ್ಟೆ ಪ್ರಾಂಗಣದ ಮಾರಾಟದ ಅಂಕಿ ಅಂಶಗಳ ಜೊತೆಗೆ ಪ್ರಾಂಗಣದ ಹೊರಗಿನ ವಹಿವಾಟುಗಳ ಬೆಲೆ ಮತ್ತು ಪ್ರಮಾಣದ ಮಾಹಿತಿಯನ್ನು 'ಕೃಷಿ ಮಾರಾಟ ವಾಹಿನಿ' ಮೂಲಕ ರೈತರಿಗೆ ಲಭ್ಯವಾಗುವಂತೆ ಮಾಡಿದರೆ ರೈತರಿಗೆ ಪ್ರಯೋಜನವಾಗುತ್ತದೆ. ಈ ಉದ್ದೇಶಕ್ಕಾಗಿ ಎರಡು ಸಲಹೆಗಳನ್ನು ನೀಡಲಾಗಿದೆ. **ಮೊದಲನೆಯದಾಗಿ,** GST ಇ–ವೇ ಬಿಲ್ಲುಗಳನ್ನು ReMS ಮತ್ತು KMV ಗೆ ಲಿಂಕ್ ಮಾಡುವ ಮೂಲಕ GST ಇ–ವೇ ಬಿಲ್‌ಗಳಿಂದ ಪ್ರಾಂಗಣದ ಹೊರಗಿನ ಮಾರಾಟದ ಬೆಲೆ ಮತ್ತು ಪ್ರಮಾಣದ ಬಗ್ಗೆ ಮಾಹಿತಿಯನ್ನು ಪಡೆಯಬಹುದು. ಸಹಕಾರ ಇಲಾಖೆ ಮತ್ತು ಆರ್ಥಿಕ ಇಲಾಖೆಯು ಮಾರುಕಟ್ಟೆ ಪ್ರಾಂಗಣದ ಹೊರಗೆ ವ್ಯಾಪಾರ ಮಾಡುವ ಕೃಷಿ ಉತ್ಪನ್ನಗಳ ಬೆಲೆ, ಪ್ರಮಾಣ ಇತ್ಯಾದಿ ಮಾಹಿತಿಯನ್ನು ReMS ಮತ್ತು KMV ಗೆ ರವಾನಿಸುವ ಸಾಫ್ಟ್‌ವೇರ್ ವ್ಯವಸ್ಥೆಯನ್ನು ರೂಪಿಸಬಹುದು. **ಎರಡನೆಯದಾಗಿ,** ಸಹಕಾರ ಇಲಾಖೆಯು ಮಾರುಕಟ್ಟೆ ಪ್ರಾಂಗಣಗಳ ಹೊರಗಿನ ಮಾರಾಟಕ್ಕೆ ಮಾರುಕಟ್ಟೆ ಶುಲ್ಕವನ್ನು ವಿಧಿಸದೆ ಪರವಾನಿಗೆ ತೆಗೆದುಕೊಳ್ಳುವುದನ್ನು ಕಡ್ಡಾಯಗೊಳಿಸಬಹುದು. ಈ ಮಾರಾಟಗಳ ಮಾಹಿತಿಯನ್ನು ರೈತರಿಗೆ ಮತ್ತು ವ್ಯಾಪಾರಿಗಳಿಗೆ ಹಂಚಬಹುದು.
4. ಇ–ಆಫೀಸ್ ತಲುಪದ ಕಚೇರಿಗಳು ಮತ್ತು ಸಂಸ್ಥೆಗಳಿಗೆ ಇ–ಆಫೀಸ್‌ಅನ್ನು ವಿಸ್ತರಿಸಲು ಇ–ಆಡಳಿತ ಇಲಾಖೆಯಿಂದ ಅನುಮತಿ ನೀಡುವ ಅಂತರ್ಜಾಲದ ಮೂಲಕ ಪ್ರತ್ಯೇಕ

ನಿದರ್ಶನವನ್ನು(Instance)ರಚಿಸಬಹುದು. ಇದರಿಂದ ಅಂತರ್ಜಾಲದ ಮೂಲಕ ಇ-ಆಫೀಸ್‌ನ್ನು ಬಳಸಬಹುದು.

5. ಯುಎಸ್ಎ, ನ್ಯೂಜಿಲ್ಯಾಂಡ್, ಕೆನಡಾ ಮುಂತಾದ ಹಲವು ದೇಶಗಳು ಇ-ಆಡಳಿತ ಉಪಕ್ರಮಗಳು ಮತ್ತು ತಂತ್ರಜ್ಞಾನದ ಅಳವಡಿಕೆಗೆ ಮಾರ್ಗದರ್ಶನ ನೀಡಲು ತಮ್ಮ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಲ್ಲಿ ಮುಖ್ಯ ತಂತ್ರಜ್ಞಾನ ಅಧಿಕಾರಿ(CTO) ಗಳನ್ನು ನೇಮಿಸಿವೆ. ಇ-ಆಡಳಿತ ಇಲಾಖೆಯಲ್ಲಿ 'ಮುಖ್ಯ ತಂತ್ರಜ್ಞಾನ ಅಧಿಕಾರಿ'(CTO) ಹುದ್ದೆಯನ್ನು ಸೃಜಿಸಬಹುದು.

## 18. ಇ-ಸಂಗ್ರಹಣೆ

1. ಈ ಕೆಳಗಿನ ಅಂಶಗಳನ್ನು ಒಳಗೊಳ್ಳಲು ಇ-ಸಂಗ್ರಹಣೆ ವ್ಯವಸ್ಥೆಯಲ್ಲಿ ಪೂರೈಕೆದಾರರ (ವೆಂಡರ್) ನಿರ್ವಹಣಾ ನಿಯಂತ್ರಣವನ್ನು ಕೆಳಗಿನ ಅಂಶಗಳೊಂದಿಗೆ ಪರಿಚಯಿಸಬಹುದು.
2. **ಪೂರೈಕೆದಾರರ ಇತಿಹಾಸ, ಕೆಲಸದ ಹೊರೆ ಮತ್ತು ಮೌಲ್ಯೀಕರಣದ ವರದಿ:** ನಿರ್ದಿಷ್ಟ ಅವಧಿಯಲ್ಲಿ ವಿವಿಧ ಇಲಾಖೆಗಳೊಂದಿಗೆ ನಿರ್ದಿಷ್ಟ ಪೂರೈಕೆದಾರರು ಮಾಡಿದ ಎಲ್ಲಾ ಒಪ್ಪಂದಗಳು / ವಹಿವಾಟುಗಳ ವಿವರಗಳನ್ನು ಮತ್ತು ಅವರ ಪ್ರಸ್ತುತ ಕೆಲಸದ ಆರ್ಥಿಕ ಹೊರೆಯನ್ನು ನೀಡುವುದು.
3. ಹಣಕಾಸಿನ ಸಾಮರ್ಥ್ಯ, ಕೆಲಸದ ಹೊರೆ, ಸಮಯೋಚಿತತೆ ಮತ್ತು ಅನುಸರಣೆಗಳನ್ನು ಪೂರೈಕೆದಾರರ ರಿಸ್ಕ್ ರೇಟಿಂಗ್‌ಗಳಿಗೆ ಪರಿಗಣಿಸುವುದು. ಮೇಲಿನ ರಿಸ್ಕ್ ಅಂಶಗಳ ಮೇಲೆ ಸ್ವಯಂಚಾಲಿತ ಇನ್‌ಪುಟ್ಸ್‌ಗಳೊಂದಿಗೆ ವೆಂಡರುಗಳ ರಿಸ್ಕ್ ಸೂಚ್ಯಂಕವನ್ನು ಅಭಿವೃದ್ಧಿಪಡಿಸಬಹುದು ಮತ್ತು ತತ್‌ಕ್ಷಣದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಸಿಸ್ಟಮ್‌ನಲ್ಲಿಯೇ ಇವುಗಳು ಲಭ್ಯವಾಗುವಂತೆ ಮಾಡಬಹುದು.

## 19. ಸಂಪನ್ಮೂಲಗಳನ್ನು ಹೆಚ್ಚಿಸುವುದು.

1. ಸುಮಾರು 5 ರಾಜ್ಯಗಳು, ಹರಿಯಾಣ, ರಾಜಸ್ಥಾನ, ಹಿಮಾಚಲ ಪ್ರದೇಶ, ಪಂಜಾಬ್ ಮತ್ತು ಪುದುಚೇರಿಗಳು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ NRI ಕೋಟಾವನ್ನು ಒದಗಿಸುತ್ತವೆ. ಕರ್ನಾಟಕದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಶೇ.5 ರಿಂದ ಶೇ.10 ರಷ್ಟು NRI ಕೋಟಾವನ್ನು ಸೃಜಿಸಬಹುದು. ಅವರಿಗೆ ಹೆಚ್ಚಿನ ಶುಲ್ಕವನ್ನು ವಿಧಿಸಬಹುದು. ಆಯಾ ಸರ್ಕಾರಿ ವೈದ್ಯಕೀಯ ಆಸ್ಪತ್ರೆಯ ಅಭಿವೃದ್ಧಿಗಾಗಿ ಈ ಮೊತ್ತವನ್ನು ಬಳಸಬಹುದು.
2. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಕ್ರೀಡಾ ಪ್ರಾಧಿಕಾರ ಹಾಗೂ ಜಿಲ್ಲಾ ಕ್ರೀಡಾಭಿವೃದ್ಧಿ ನಿಧಿಯನ್ನು ಸಿಎಸ್‌ಆರ್ ಫಂಡ್‌ನ್ನು ಸಂಗ್ರಹಿಸಲು ಮತ್ತು ಕ್ರೀಡೆಗಳನ್ನು ಅಭಿವೃದ್ಧಿಪಡಿಸಲು ಸ್ಥಾಪಿಸುವುದು.
3. BBMP ಕಾಯಿದೆ, ಕರ್ನಾಟಕ ಮಹಾನಗರ ಪಾಲಿಕೆ ಕಾಯಿದೆ, ಕರ್ನಾಟಕ ಪೌರಾಡಳಿತ ಕಾಯಿದೆ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (GS&PR) ಕಾಯಿದೆಗಳನ್ನು (ಉದಾ. BBMP ಕಾಯಿದೆ 2020 ರ ಕಲಂ 143 (1), KGSPR ಕಾಯಿದೆಯ ಕಲಂ.200) ತಿದ್ದುಪಡಿ ಮಾಡಿ ಆಸ್ತಿ ತೆರಿಗೆಯ ಶೇ.1 ಪ್ರಮಾಣದಲ್ಲಿ ಕ್ರೀಡಾ ಸೆಸ್ ಅನ್ನು ವಿಧಿಸಬಹುದು.
4. ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ವಿವಿಧ ಸೆಸ್‌ಗಳನ್ನು ವಿಧಿಸಬಹುದು.
5. ಪರಿಷ್ಕರಣೆಯ ವರ್ಷವನ್ನು ಪರಿಗಣಿಸಿ ಹಣದುಬ್ಬರ ಸೂಚ್ಯಂಕವನ್ನು ಆಧರಿಸಿ, ವಿವಿಧ ಶುಲ್ಕಗಳನ್ನು ಪರಿಷ್ಕರಿಸಲು ಶಿಫಾರಸುಗಳನ್ನು ಮಾಡಲಾಗಿದೆ.